All India Radio: Bangalore
National Bulletin In Kannada
13.03.2025 07.35 a.m.
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು
<><><><>

ಮುಖ್ಯಾಂಶಗಳು

- ಎರಡು ದಿನಗಳ ಯಶಸ್ವಿ ಮಾರಿಷಸ್ ಪ್ರವಾಸ ಪೂರ್ಣಗೊಳಿಸಿ ದೆಹಲಿಗೆ ಹಿಂತಿರುಗಿದ ಪ್ರಧಾನಮಂತ್ರಿ ನರೇಂದ್ರ ಮೋದಿ
- ಮುಂಬೈನಲ್ಲಿ ವೇವ್ಸ್ -೨೦೨೫ ಶೃಂಗಸಭೆ : ದೆಹಲಿಯಲ್ಲಿಂದು ಜಾಗತಿಕ ಸಮುದಾಯ ತಲುಪಲು ಸಚಿವರ ನೇತೃತ್ವದಲ್ಲಿ ಪೂರ್ವಭಾವಿ ಸಭೆ
- ಕಳೆದ ೧೦ ವರ್ಷದಲ್ಲಿ ವಿದೇಶಿ ಉಪಗ್ರಹ ಉಡಾವಣೆ ಮೂಲಕ ಇಸ್ರೋಗೆ ೧೪೩ ಮಿಲಿಯನ್ ಡಾಲರ್ ಆದಾಯ
- ಯುವ ಲೇಖಕರಿಗೆ ಮಾರ್ಗದರ್ಶನ ನೀಡುವ 'ಪಿಎಂ-ಯುವ ೩.೦' ಅಡಿಯಲ್ಲಿ ಲೇಖಕರಿಗೆ ಅಖಿಲ ಭಾರತ ಸ್ಪರ್ಧೆ
- ಮಹಿಳಾ ಪ್ರೀಮಿಯರ್ ಕ್ರಿಕೆಟ್ ; ಇಂದು ಸಂಜೆ ಎಲಿಮಿನೇಟರ್ ಪಂದ್ಯದಲ್ಲಿ ಮುಂಬೈ ಇಂಡಿಯನ್-ಗುಜರಾತ್ ಜೈಂಟ್ಸ್ ಸೆಣಸು

<><><><>

ಎರಡು ದಿನಗಳ ಐತಿಹಾಸಿಕ ಹಾಗೂ ಫಲಪ್ರದ ಮಾರಿಷಸ್ ಪ್ರವಾಸವನ್ನು ಪೂರ್ಣಗೊಳಿಸಿದ ಬಳಿಕ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಕಳೆದ ಮಧ್ಯರಾತ್ರಿ ದೆಹಲಿಗೆ ವಾಪಸ್ಸಾದರು. ಪ್ರಧಾನಿ ಅವರ ಭೇಟಿ ಸಮಯದಲ್ಲಿ ಭಾರತ ಮತ್ತು ಮಾರಿಷಸ್ ತಮ್ಮ ಸಂಬಂಧಗಳನ್ನು ವೇಗವರ್ಧಿತ ಕಾರ್ಯತಂತ್ರದ ಪಾಲುದಾರಿಕೆ ಹಂತಕ್ಕೆ ಏರಿಸಿವೆ ಮತ್ತು ಸಾಗರ ಭದ್ರತೆ ಸೇರಿದಂತೆ ಹಲವು ವಲಯಗಳಲ್ಲಿ ಸಹಕಾರವನ್ನು ಹೆಚ್ಚಿಸಲು ಮತ್ತು ಸ್ಥಳೀಯ ಕರೆನ್ಸಿಗಳಲ್ಲಿ ವ್ಯಾಪಾರ ಉತ್ತೇಜಿಸಲು ಎರಡೂ ದೇಶಗಳು ಒಟ್ಟು ಎಂಟು ಒಪ್ಪಂದಗಳಿಗೆ ಸಹಿ ಹಾಕಿವೆ. ಮಾರಿಷಸ್‌ನ ಪೋರ್ಟ್ ಲೂಯಿಸ್‌ನಲ್ಲಿ ನಿನ್ನೆ ಸಂಜೆ ಪ್ರಧಾನಿ ನರೇಂದ್ರ ಮೋದಿ ಮತ್ತು ಮಾರಿಷಸ್ ಪ್ರಧಾನಿ ಡಾ.

ನವೀನ್‌ಚಂದ್ರ ರಾಮ್‌ಗೂಲಂ ನಡುವೆ ನಡೆದ ನಿಯೋಗ ಮಟ್ಟದ ಮಾತುಕತೆಯ ವೇಳೆ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ. ಮಾತುಕತೆಗಳ ನಂತರ, ನರೇಂದ್ರಮೋದಿ ಜಾಗತಿಕ ದಕ್ಷಿಣಕ್ಕಾಗಿ ಭಾರತದ ಹೊಸ ದೃಷ್ಟಿಕೋನವನ್ನು ಘೋಷಿಸಿದರು, ಅದಕ್ಕೆ "ಮಹಾಸಾಗರ್" ಅಥವಾ "ಪ್ರದೇಶಗಳಾದ್ಯಂತ ಭದ್ರತೆ ಮತ್ತು ಬೆಳವಣಿಗೆಗೆ ಪರಸ್ಪರ ಮತ್ತು ಸಮಗ್ರ ಪ್ರಗತಿ" ಎಂದು ಹೆಸರಿಸಿದರು. ಸಭೆಯಲ್ಲಿ, ಈ ಪ್ರದೇಶದಲ್ಲಿನ ಎರಡೂ ರಾಷ್ಟ್ರಗಳ ಹಂಚಿಕೆಯ ಉದ್ದೇಶಗಳನ್ನು ಗಮನದಲ್ಲಿಟ್ಟುಕೊಂಡು, ಮಾರಿಷಸ್‌ನ ರಕ್ಷಣೆ ಮತ್ತು ಭದ್ರತಾ ಅಗತ್ಯಗಳನ್ನು ಬಲಪಡಿಸುವಲ್ಲಿ ಭಾರತವು ನಿರಂತರ ಬೆಂಬಲ ಮತ್ತು ಸಹಾಯ ನೀಡಲಿದೆ ಎಂದು ಪ್ರಧಾನಿ ಪುನರುಚ್ಚರಿಸಿದರು.

ಧ್ವನಿ: ಪ್ರಧಾನಮಂತ್ರಿ (೨೮ ಸೆಕೆಂಡ್‌ಗಳು)

ಮಾರಿಷಸ್‌ಗೆ ತಮ್ಮ ಎರಡು ದಿನಗಳ ಪ್ರವಾಸದ ಎರಡನೇ ಮತ್ತು ಕೊನೆಯ ದಿನದಂದು ನಿನ್ನೆ ಚಾಂಪ್ ಡಿ ಮಾರ್ಸ್‌ನಲ್ಲಿ ಮುಖ್ಯ ಅತಿಥಿಯಾಗಿ ಮಾರಿಷಸ್‌ನ ರಾಷ್ಟ್ರೀಯ ದಿನಾಚರಣೆಯಲ್ಲಿ ಪ್ರಧಾನಿ ಭಾಗವಹಿಸಿದ್ದರು. ಸಮಾರಂಭದಲ್ಲಿ, ಮಾರಿಷಸ್ ಅಧ್ಯಕ್ಷ ಧರಂಬೀರ್ ಗೋಖೂಲ್ ಅವರು ಭಾರತ-ಮಾರಿಷಸ್ ಪಾಲುದಾರಿಕೆಗೆ ನೀಡಿದ ಅದ್ಭುತ ಕೊಡುಗೆಗಾಗಿ ನರೇಂದ್ರ ಮೋದಿ ಅವರಿಗೆ ಗ್ರ್ಯಾಂಡ್ ಕಮಾಂಡರ್ ಆಫ್ ದಿ ಆರ್ಡರ್ ಆಫ್ ದಿ ಸ್ಟಾರ್ ಮತ್ತು ಕೀ ಆಫ್ ದಿ ಹಿಂದೂ ಮಹಾಸಾಗರ ಪ್ರಶಸ್ತಿಯನ್ನು ಪ್ರದಾನ ಮಾಡಿದರು. ಮಾರಿಷಸ್‌ನ ಅತ್ಯುನ್ನತ ನಾಗರಿಕ ಪ್ರಶಸ್ತಿಯನ್ನು ಪಡೆದ ಮೊದಲ ಭಾರತೀಯ ಪ್ರಧಾನಿ ನರೇಂದ್ರ ಮೋದಿ ಅವರಾಗಿದ್ದಾರೆ. ಮಾರಿಷಸ್‌ನ ರಾಷ್ಟ್ರೀಯ ದಿನಾಚರಣೆಯ ಮೆರವಣಿಗೆಯಲ್ಲಿ ಭಾರತೀಯ ನೌಕಾಪಡೆಯ ತುಕಡಿ ಭಾಗವಹಿಸಿತ್ತು. ಇದಕ್ಕೂ ಮುನ್ನ ರಾಷ್ಟ್ರೀಯ ಸಭೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ, ಪ್ರಧಾನಿ ನರೇಂದ್ರ ಮೋದಿ ಮತ್ತು ರಾಮ್‌ಗೂಲಂ ೨೦ ಅಧಿಕ ಪರಿಣಾಮಗಳ ಸಮುದಾಯ ಅಭಿವೃದ್ಧಿ ಯೋಜನೆಗಳು ಮತ್ತು ಭಾರತ ನೆರವಿನ ಪ್ರದೇಶ ಆರೋಗ್ಯ ಕೇಂದ್ರವನ್ನು ಉದ್ಘಾಟಿಸಿದರು. ಈ ಉಪಕ್ರಮಗಳು ಮಾರಿಷಸ್‌ನ ಆರೋಗ್ಯ ರಕ್ಷಣೆ ಮತ್ತು ತಳಮಟ್ಟದ ಮೂಲಸೌಕರ್ಯವನ್ನು ಬಲಪಡಿಸುತ್ತದೆ ಮತ್ತು ಜನರಿಗೆ ಹಲವು ಪ್ರಯೋಜನಗಳನ್ನು ಕಲ್ಪಿಸುತ್ತವೆ.

<><><><>

ಮುಂಬೈನಲ್ಲಿ ನಡೆಯಲಿರುವ ವಿಶ್ವ ಧ್ವನಿ ದೃಶ್ಯ ಮತ್ತು ಮನರಂಜನಾ ಶೃಂಗಸಭೆ-ವೇವ್ಸ್ ೨೦೨೫ಗೆ ಪೂರ್ವಭಾವಿಯಾಗಿ ಜಾಗತಿಕ ಸಮುದಾಯವನ್ನು ಸಂಪರ್ಕಿಸುವ ಎಲ್ಲಾ ಪ್ರಯತ್ನಗಳನ್ನು ಭಾರತ ಸರ್ಕಾರ ಕೈಗೊಂಡಿದೆ. ಆ ಹಿನ್ನೆಲೆಯಲ್ಲಿ ಕೇಂದ್ರ ವಿದೇಶಾಂಗ ಸಚಿವ ಡಾ. ಜೈಶಂಕರ್, ವಾರ್ತಾ ಮತ್ತು ಪ್ರಸಾರ ಖಾತೆ ಸಚಿವ ಅಶ್ವಿನಿ ವೈಷ್ಣವ್, ರಾಜ್ಯ ಸಚಿವ ಡಾ. ಎಲ್. ಮುರುಗನ್ ನವದೆಹಲಿಯಲ್ಲಿ ಇಂದು ಪೂರ್ವಭಾವಿ ಸಭೆ ಕರೆದಿದ್ದು, ಇದರಲ್ಲಿ ಅತಿಥ್ಯ ರಾಜ್ಯವಾದ ಮಹಾರಾಷ್ಟ್ರದ ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ಭಾಗವಹಿಸಲಿದ್ದಾರೆ. ವೇವ್ಸ್ ಶೃಂಗಸಭೆಯನ್ನು ಜಾಗತಿಕ ವೇದಿಕೆಯಾಗಿ ಪರಿವರ್ತಿಸಿ ೧೦೦ಕ್ಕೂ ಅಧಿಕ ರಾಯಭಾರಿಗಳನ್ನು ಭಾಗವಹಿಸುವಂತೆ ಮಾಡಲು ಅಗತ್ಯ ಕ್ರಮಗಳ ಕುರಿತು ಸಭೆಯಲ್ಲಿ ಚರ್ಚಿಸಲಾಗುವುದು. ವೇವ್ಸ್ ಲಾಂಛನದಡಿ ಸಾಮರಸ್ಯ ಮತ್ತು ಮಾಧ್ಯಮ ಹಾಗೂ ಮನರಂಜನಾ ಕ್ಷೇತ್ರದ ಬೆಳವಣಿಗೆಗೆ ಪೂರಕ ವಾತಾವರಣ ಕಲ್ಪಿಸಲು ಈ ಶೃಂಗಸಭೆ ಮಹತ್ವದ ವೇದಿಕೆಯಾಗಿಸಲು ಸರ್ಕಾರ ಪ್ರಯತ್ನಿಸುತ್ತಿದೆ. ಮೇ ೧ ರಿಂದ ೪ರವರೆಗೆ ನಡೆಯುವ ನಾಲ್ಕು ದಿನಗಳ ಶೃಂಗಸಭೆಯನ್ನು ಜಾಗತಿಕ ಮಟ್ಟದ ಮಾಧ್ಯಮ ಸಂವಾದ ವೇದಿಕೆಯಾಗಿ ರೂಪಿಸುವುದು ಸರ್ಕಾರದ ಉದ್ದೇಶವಾಗಿದೆ.

<><><>

ಕಳೆದ ಹತ್ತು ವರ್ಷಗಳಲ್ಲಿ, ಇಸ್ರೋದ ಪಿಎಸ್‌ಎಲ್‌ವಿ, ಎಲ್‌ವಿಎಂ೩ ಮತ್ತು ಎಸ್‌ಎಸ್‌ಎಲ್‌ವಿ ಉಡಾವಣಾ ವಾಹನಗಳ ಮೂಲಕ ಒಟ್ಟು ೩೯೩ ವಿದೇಶಿ ಉಪಗ್ರಹಗಳು ಮತ್ತು ೩ ಭಾರತೀಯ ಗ್ರಾಹಕರ ಉಪಗ್ರಹಗಳನ್ನು ವಾಣಿಜ್ಯ ಆಧಾರದ ಮೇಲೆ ಉಡಾವಣೆ ಮಾಡಲಾಗಿದೆ ಎಂದು ಕೇಂದ್ರ ಸರ್ಕಾರ ಹೇಳಿದೆ. ಲೋಕಸಭೆಯಲ್ಲಿ ನಿನ್ನೆ ಪ್ರಶ್ನೆಯೊಂದಕ್ಕೆ ಲಿಖಿತ ಉತ್ತರ ನೀಡಿದ ಬಾಹ್ಯಾಕಾಶ ಖಾತೆ ರಾಜ್ಯ ಸಚಿವ ಡಾ. ಜಿತೇಂದ್ರ ಸಿಂಗ್, ೨೦೧೫ರ ಜನವರಿಯಿಂದ ೨೦೨೪ರ ಡಿಸೆಂಬರ್ ಅವಧಿಯಲ್ಲಿ ವಿದೇಶಿ ಉಪಗ್ರಹಗಳ ಉಡಾವಣೆಯ ಮೂಲಕ ಸರ್ಕಾರವು ಸುಮಾರು ೧೪೩ ಮಿಲಿಯನ್ ಅಮೆರಿಕನ್ ಡಾಲರ್ ಮತ್ತು ೨೭೨ ಮಿಲಿಯನ್ ಯುರೋಗಳಷ್ಟು ವಿದೇಶಿ ವಿನಿಮಯ ಆದಾಯ ಗಳಿಸಿದೆ ಎಂದರು. ೨೦೧೪ ರಿಂದ ಅಭಿವೃದ್ಧಿ ಹೊಂದಿದ ದೇಶಗಳ ಉಪಗ್ರಹಗಳನ್ನು ಒಳಗೊಂಡಂತೆ ಭಾರತವು ಈವರೆಗೆ ೩೪ ದೇಶಗಳ ಉಪಗ್ರಹಗಳನ್ನು ಉಡಾವಣೆ ಮಾಡಿದೆ ಎಂದು ಅವರು ಹೇಳಿದರು.

ಈ ದೇಶಗಳಲ್ಲಿ ಯುಎಸ್‌ಎ, ಯುಕೆ, ಸಿಂಗಾಪುರ್, ಕೆನಡಾ, ಕೊರಿಯಾ, ಲಕ್ಸೆಂಬರ್ಗ್, ಇಟಲಿ, ಜರ್ಮನಿ, ಬೆಲ್ಜಿಯಂ ಮತ್ತು ಫ್ರಾನ್ಸ್ ರಾಷ್ಟ್ರಗಳೂ ಸಹ ಸೇರಿವೆ.

<><><><>

ಶಿಕ್ಷಣ ಸಚಿವಾಲಯವು ಯುವ ಲೇಖಕರಿಗೆ ಮಾರ್ಗದರ್ಶನ ನೀಡುವ ಪ್ರಧಾನ ಮಂತ್ರಿ ಯೋಜನೆ -ಪಿಎಂ-ಯುವ ೩.೦ ಅಡಿಯಲ್ಲಿ ಲೇಖಕರಿಗಾಗಿ ಅಖಿಲ ಭಾರತ ಸ್ಪರ್ಧೆಯನ್ನು ನಡೆಸುತ್ತಿದೆ. ಏಪ್ರಿಲ್ ೧೦ ರವರೆಗೆ ಮೈ ಗೌವ್ ವೆಬ್‌ಸೈಟ್‌ನಲ್ಲಿ ನಡೆಸಲಾಗುವ ಸ್ಪರ್ಧೆಯ ಮೂಲಕ ಒಟ್ಟು ೫೦ ಲೇಖಕರನ್ನು ಆಯ್ಕೆ ಮಾಡಲಾಗುವುದು. ಈ ಯೋಜನೆಯು ದೇಶದಲ್ಲಿ ಓದು, ಬರವಣಿಗೆ ಮತ್ತು ಪುಸ್ತಕ ಸಂಸ್ಕೃತಿಯನ್ನು ಉತ್ತೇಜಿಸುವ ಗುರಿ ಹೊಂದಿದೆ. ಸ್ವೀಕರಿಸಿದ ಪ್ರಸ್ತಾವನೆಗಳನ್ನು ಈ ವರ್ಷದ ಏಪ್ರಿಲ್‌ನಲ್ಲಿ ಉನ್ನತ ಶಿಕ್ಷಣ ಇಲಾಖೆಯು ಮೌಲ್ಯಮಾಪನ ಮಾಡುತ್ತದೆ. ಈ ಯೋಜನೆಯ ಭಾಗವಾಗಿ, ೩೦ ವರ್ಷಕ್ಕಿಂತ ಕಡಿಮೆ ವಯಸ್ಸಿನ ಆಯ್ದ ಯುವ ಮತ್ತು ಉದಯೋನ್ಮುಖ ಲೇಖಕರು ತರಬೇತಿ ಮತ್ತು ಮಾರ್ಗದರ್ಶನ ಪಡೆಯಲಿದ್ದಾರೆ. ಮಾರ್ಗದರ್ಶನದ ಅಡಿಯಲ್ಲಿ, ನವದೆಹಲಿ ವಿಶ್ವ ಪುಸ್ತಕ ಮೇಳ ೨೦೨೫ ರ ಸಮಯದಲ್ಲಿ ಪಿಎಂ-ಯುವ ೩.೦ ಲೇಖಕರಿಗೆ ರಾಷ್ಟ್ರೀಯ ಶಿಬಿರವನ್ನು ಸಹ ನಡೆಸಲಾಗುತ್ತದೆ. ಪಿಎಂ-ಯುವ ೩.೦ - ಯುವ, ಮುಂಬರುವ ಮತ್ತು ಬಹುಮುಖ ಲೇಖಕರಿಗೆ ಭಾರತದ ಶ್ರೀಮಂತ ಸಂಸ್ಕೃತಿ, ಪರಂಪರೆ ಮತ್ತು ದೇಶದ ಅಭಿವೃದ್ಧಿ ಮತ್ತು ಬೆಳವಣಿಗೆಗೆ ದಾರ್ಶನಿಕರ ಕೊಡುಗೆ ಅರ್ಥಮಾಡಿಕೊಳ್ಳಲು ಮತ್ತು ಪ್ರಶಂಸಿಸಲು ಯುವಕರನ್ನು ಪ್ರೋತ್ಸಾಹಿಸುವ ಪ್ರಧಾನಮಂತ್ರಿಯವರ ದೂರದೃಷ್ಟಿಯ ಯೋಜನೆಯಾಗಿದೆ.

<><><><>

ಸಂಕಷ್ಟದಲ್ಲಿರುವ ಮಹಿಳೆಯರಿಗೆ ಬೆಂಬಲ ನೀಡಲು ದೇಶಾದ್ಯಂತ ೮೦೨ ಒನ್-ಸ್ಟಾಪ್ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ರಾಜ್ಯ ಸಚಿವೆ ಸಾವಿತ್ರಿ ಠಾಕೂರ್ ಹೇಳಿದ್ದಾರೆ.

ರಾಜ್ಯಸಭೆಯಲ್ಲಿ ಪ್ರಶ್ನೆಯೊಂದಕ್ಕೆ ಲಿಖಿತ ಉತ್ತರ ನೀಡಿರುವ ಅವರು, ಖಾಸಗಿ ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ದೌರ್ಜನ್ಯಕ್ಕೆ ಒಳಗಾದ ಮಹಿಳೆಯರಿಗೆ ಮತ್ತು ಸಂಕಷ್ಟದಲ್ಲಿರುವವರಿಗೆ ಈ ಕೇಂದ್ರಗಳು ಒಂದೇ ಸೂರಿನಡಿ ಸಮಗ್ರ ನೆರವು ಮತ್ತು ವೈದ್ಯಕೀಯ ನೆರವು, ಕಾನೂನು ನೆರವು ಮತ್ತು ಸಲಹೆ,

ತಾತ್ಕಾಲಿಕ ಆಶ್ರಯ, ಪೊಲೀಸ್ ನೆರವು ಮತ್ತು ಅಗತ್ಯವಿರುವ ಮಹಿಳೆಯರಿಗೆ ಮಾನಸಿಕ-ಸಾಮಾಜಿಕ ಸಮಾಲೋಚನೆಯಂತಹ ಸೇವೆಗಳನ್ನು ಒದಗಿಸುತ್ತದೆ. ಈ ಯೋಜನೆಯು ಬೇಡಿಕೆಯ ಮೇರೆಗೆ ನಡೆಯುವುದರಿಂದ, ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು ಪ್ರತಿ ಜಿಲ್ಲೆಯಲ್ಲಿ ಕನಿಷ್ಠ ಒಂದು ಒನ್ ಸ್ಟಾಪ್ ಕೇಂದ್ರಗಳನ್ನು  ಸ್ಥಾಪಿಸಲು ಮತ್ತು ಮಹಿಳೆಯರ ವಿರುದ್ಧ ಹೆಚ್ಚಿನ ಅಪರಾಧ ಪ್ರಕರಣಗಳಿರುವ ಅಥವಾ ದೊಡ್ಡ ಭೌಗೋಳಿಕ ಪ್ರದೇಶ ಅಥವಾ ಹೆಚ್ಚಿನ ಜನಸಂಖ್ಯೆ ಹೊಂದಿರುವ ಅಥವಾ ಮಹತ್ವಾಕಾಂಕ್ಷೆಯ ಜಿಲ್ಲೆಗಳಲ್ಲಿ ಹೆಚ್ಚುವರಿ ಕೇಂದ್ರಗಳನ್ನು ಸ್ಥಾಪಿಸಲು ಪ್ರೋತ್ಸಾಹಿಸಲಾಗುತ್ತದೆ ಎಂದು ಹೇಳಿದರು. ಇದು ಕೇಂದ್ರ ಪ್ರಾಯೋಜಿತ ಯೋಜನೆಯಾಗಿದ್ದು, ಕೇಂದ್ರ ಸರ್ಕಾರವು ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಶೇಕಡ ೧೦೦ ರಷ್ಟು ಆರ್ಥಿಕ ಸಹಾಯವನ್ನು ಒದಗಿಸುತ್ತದೆ.

<><><><>

ಲೋಕಸಭೆ ತೈಲ ನಿಕ್ಷೇಪಗಳು ನಿಯಂತ್ರಣ ಮತ್ತು ಅಭಿವೃದ್ಧಿ ತಿದ್ದುಪಡಿ ೨೦೨೪ಕ್ಕೆ ಅನುಮೋದನೆ ನೀಡುವುದರೊಂದಿಗೆ ಸಂಸತ್ ಮಸೂದೆಯನ್ನು ಅಂಗೀಕರಿಸಿದಂತಾಗಿದೆ. ೧೯೪೮ರ ವಿಧೇಯಕಕ್ಕೆ ಬದಲಾಗಿ ಈ ಮಸೂದೆಯನ್ನು ತರಲಾಗಿದೆ. ಇದು ಹೈಡ್ರೋಕಾರ್ಬನ್, ಕಲ್ಲಿದ್ದಲು ಹಾಗೂ ಅನಿಲ ನಿಕ್ಷೇಪಗಳ ಕುರಿತು ವ್ಯಾಖ್ಯಾನವನ್ನು ವಿಸ್ತರಿಸಲಿದೆ. ಜೊತೆಗೆ ಕಲ್ಲಿದ್ದಲು, ಲಿಗ್ನೈಟ್ ಮತ್ತು ಹೀಲಿಯಂ ಅನ್ನು ಖನಿಜ ನಿಕ್ಷೇಪಗಳ ವ್ಯಾಪ್ತಿಗೆ ಸೇರ್ಪಡೆ ಮಾಡಲು ಅವಕಾಶ ಕಲ್ಪಿಸುತ್ತದೆ.

<><><><>

ಕ್ಯೂಎಸ್ ವಿಷಯವಾರು ಜಾಗತಿಕ ಶ್ರೇಷ್ಠ ಶಿಕ್ಷಣ ಸಂಸ್ಥೆಗಳ ಶ್ರೇಯಾಂಕದಲ್ಲಿ ಭಾರತದ ೯ ವಿಶ್ವ ವಿದ್ಯಾಲಯಗಳು ಹಾಗೂ ಶಿಕ್ಷಣ ಸಂಸ್ಥೆಗಳು ಅಗ್ರ ೫೦ ಸಂಸ್ಥೆಗಳಲ್ಲಿ ಸ್ಥಾನ ಪಡೆದಿವೆ. ೧೫ನೇ ಆವೃತ್ತಿಯ ಕ್ಯೂಎಸ್ ಜಾಗತಿಕ ವಿಶ್ವವಿದ್ಯಾಲಯಗಳ ಶ್ರೇಯಾಂಕ ಪಟ್ಟಿಯನ್ನು ಪ್ರಕಟಿಸಲಾಗಿದೆ. ಭಾರತ ಒಟ್ಟಾರೆ ಅಗ್ರ ೫೦ರಲ್ಲಿ ೧೨ನೇ ಸ್ಥಾನ ಪಡೆದುಕೊಂಡಿದೆ. ಧನಾಬಾದ್‌ನ ಭಾರತೀಯ ಸ್ಕೂಲ್ ಆಫ್ ಮೈನ್ಸ್ ಜಾಗತಿಕವಾಗಿ ೨೦ನೇ ಶ್ರೇಯಾಂಕ ಗಳಿಸಿದೆ. ಅಂತೆಯೇ ಬಾಂಬೆ ಐಐಟಿ ೨೮ನೇ ಸ್ಥಾನ ಹಾಗೂ ಖರಗ್‌ಪುರ್ ಐಐಟಿ ೪೫ನೇ ಸ್ಥಾನ ಪಡೆದುಕೊಂಡಿದೆ.

ಐಐಎಂ ಅಹಮದಾಬಾದ್ ಮತ್ತು ಬೆಂಗಳೂರು ಸಂಸ್ಥೆಗಳು ಕ್ರಮವಾಗಿ ೨೭ ಹಾಗೂ ೪೦ನೇ ಸ್ಥಾನವನ್ನು ಪಡೆದುಕೊಂಡಿವೆ.

<><><><>

ಮಹಿಳಾ ಪ್ರೀಮಿಯರ್ ಲೀಗ್ ಕ್ರಿಕೆಟ್‌ನಲ್ಲಿ, ಮುಂಬೈ ಇಂಡಿಯನ್ಸ್ ಇಂದು ಸಂಜೆ ಮುಂಬೈನ ಬ್ರಬೋರ್ನ್ ಕ್ರೀಡಾಂಗಣದಲ್ಲಿ ನಡೆಯಲಿರುವ ಎಲಿಮಿನೇಟರ್ ಪಂದ್ಯದಲ್ಲಿ ಗುಜರಾತ್ ಜೈಂಟ್ಸ್ ವಿರುದ್ಧ ಸೆಣಸಲಿದೆ. ಈ ಪಂದ್ಯವು ಭಾರತೀಯ ಕಾಲಮಾನ ಸಂಜೆ ೭:೩೦ ಕ್ಕೆ ಆರಂಭವಾಗಲಿದೆ. ಡೆಲ್ಲಿ ಕ್ಯಾಪಿಟಲ್ಸ್ ಈಗಾಗಲೇ ೧೦ ಅಂಕಗಳೊಂದಿಗೆ ಒಟ್ಟಾರೆ ಅಂಕಪಟ್ಟಿಯಲ್ಲಿ ಅಗ್ರಸ್ಥಾನ ಪಡೆಯುವ ಮೂಲಕ ಟೂರ್ನಿಯ ಫೈನಲ್ ತಲುಪಿದೆ. ಮುಂಬೈ ಎರಡನೇ ಸ್ಥಾನದಲ್ಲಿದ್ದರೆ, ಗುಜರಾತ್ ಜೈಂಟ್ಸ್ ಮೂರನೇ ಸ್ಥಾನ ಪಡೆದುಕೊಂಡಿದ್ದು, ಉಳಿದ ಅಂತಿಮ ಸ್ಥಾನಕ್ಕಾಗಿ ಎರಡೂ ತಂಡಗಳ ನಡುವೆ ಹಣಾಹಣಿ ಏರ್ಪಟ್ಟಿದೆ. ಮುಂಬೈ ಇಂಡಿಯನ್ಸ್ ಇತ್ತೀಚೆಗೆ ಗುಜರಾತ್ ಜೈಂಟ್ಸ್ ವಿರುದ್ಧ ಒಂಬತ್ತು ರನ್‌ಗಳ ಜಯ ಸಾಧಿಸಿ ತಮ್ಮ ತವರು ಮೈದಾನದಲ್ಲಿ ಆಡುವ ಅವಕಾಶ ಪಡೆದಿದೆ. ಈ ಋತುವಿನಲ್ಲಿ, ಮುಂಬೈ, ಎಂಟು ಪಂದ್ಯಗಳಲ್ಲಿ ಐದು ಜಯಗಳೊಂದಿಗೆ ಪ್ಲೇಆಫ್ ಸ್ಥಾನವನ್ನು ಗಳಿಸಿದರೆ, ಗುಜರಾತ್ ನಾಲ್ಕು ಪಂದ್ಯ ಜಯಗಳಿಸುವುದರೊಂದಿಗೆ ಮುನ್ನಡೆ ಸಾಧಿಸಿದೆ. ಗಮನಾರ್ಹವಾಗಿ, ಮುಂಬೈ ಇಂಡಿಯನ್ಸ್ ಗುಜರಾತ್ ಜೈಂಟ್ಸ್ ವಿರುದ್ಧ ಅಜೇಯ ೬-೦ ದಾಖಲೆಯನ್ನು ಹೊಂದಿದೆ.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>